ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂ: **565/2025**

| | | |
|---|---|---|
| ಸಾಕ್ಷಿಯ ಹೆಸರು: | ಖಾದರಬಿ @ ಕೈರೂನ್ನಿಸಾ | ಪ್ರಾಸಾ: 1 |
| ಗಂಡನ/ತಂದೆಯ ಹೆಸರು: | ಅಬ್ಬಾಸ ಅಲಿ | ಚಾಸಾ: 1 |
| ವಯಸ್ಸು: | 36 ವರ್ಷ | ದಿ: 19-02-2026 |
| ಉದ್ಯೋಗ: | ಮನೆಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳ: | ಕಡೆಚೂರು | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾ: 7 ನನ್ನ ಗಂಡ. ನನಗೆ ಚಾಸಾ: 4 ರಿಂದ 6, 8 ರವರು ಹಾಗೂ ಆರೋಪಿತರ ಪರಿಚಯವಿದೆ. ಸುಮಾರು 1 ವರೆ ವರ್ಷದ ಹಿಂದೆ ನಾನು ಮನೆ ಕಟ್ಟಲು ಹೋಗಿರುವಾಗ ಗೂಡೂರಿಗೆ ಹೋಗಿರುವಾಗ ಸದರಿ ಆರೋಪಿತರು ನನಗೆ ಬೈದು, ಕಳುಹಿಸಿರುತ್ತಾರೆ. ಸದರಿ ನನ್ನ ಅಣ್ಣನನ್ನು ಕರೆದುಕೊಂಡು ಬಾ ಅಲ್ಲಿಯವರೆಗೂ ಜಾಗ ಬಿಡುವುದಿಲ್ಲ ಎಂದು ಹೇಳಿರುತ್ತಾರೆ. ನನ್ನ ಅಣ್ಣನಿಗೆ ದುಡ್ಡು ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ. ಆರೋಪಿತರ ವಿರುದ್ಧ ಕಾನೂನು ಕ್ರಮ ಜರುಗಿಸಲು ಠಾಣೆಗೆ ಹೋದರೂ ಕೂಡ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಂತರ ಎಸ್, ಪಿ ಕಚೇರಿಗೆ ಹೋಗಿ ಅರ್ಜಿ ಸಲ್ಲಿಸಿ ನಂತರ ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಿರುತ್ತೇನೆ. ಪೊಲಿಸರು ನನಗೆ ವಿಚಾರಣೆ ಮಾಡಿ ಪಂಚನಾಮೆಯನ್ನು ಮಾಡಿರುತ್ತಾರೆ. ನಾನು ಹೇಳಿಕೆಯನ್ನು ನೀಡಿರುತ್ತೇನೆ. ಪಂಚನಾಮೆಯನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಕಾಶೆಯನ್ನು ನಿಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ), ಫೊಟೋಗಳನ್ನು ನಿಪಿ-4 ಮತ್ತು 5, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಖರೀದಿ ಪತ್ರ ಮತ್ತು ಆರ್, ಟಿ. ಸಿ ಯನ್ನು ನಿಪಿ-6 ಮತ್ತು ನಿಪಿ-7 ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**)**

ದಿನಾಂಕಃ 03-06-2024 ರಂದು ಮದ್ಯಾಹ್ನ 12.30 ಸಮಯಕ್ಕೆ ನಮ್ಮ ಜಾಗಕ್ಕೆ ಹೋಗಿರುತ್ತೇವೆ ಎಂದರೆ ಸರಿ. ಆರೋಪಿತರು ನಮ್ಮ ಜಾಗದಲ್ಲಿ ಅಕ್ರಮ ಪ್ರವೇಶ ಮಾಡಿದ್ದರು ಎಂದರೆ ಸರಿ. ಆರೋಪಿತರು ನನಗೆ ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸೂಳೆ ಮಗಳೇ ಎಂದು ಬೈದಿರುತ್ತಾರೆ ಎಂದು ನುಡಿಯುತ್ತಾರೆ.

ಪಾಟಿ ಸವಾಲು ಃಆರೋಪಿ ಪರ ಶಿರೀ ಆರ್. ಟಿ. ಡಿ ವಕೀಲರಿಂದಃ

**1.** ನನ್ನ ಊರು ಕಡೆಚೂರು ತವರು ಮನೆ ಗೂಡೂರು. ನಾವು ಈಗ ಹೈದರಾಬಾದಲ್ಲಿ ಇರುತ್ತೇವೆ. ಹುಸೇನ ಪಟೆಲ ಇವರ ಕಡೆಯಿಂದ ನಾನು ಜಾಗ ಖರೀದಿ ಮಾಡಿರುತ್ತೇನೆ. ಹುಸೇನ ಪಟೇಲ ನನ್ನ ತಂದೆ. ಹುಸೇನ ಪಟೇಲ ಇವರ ತಂದೆ ಖಾದರ ಪಟೇಲ ಎಂದರೆ ಸರಿ. ಖಾದರ ಪಟೇಲ ಇವರಿಗೆ 3 ಜನ ಮಕ್ಕಳು ಎಂದರೆ ಸಾಕ್ಷಿಯು 5 ಜನ ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ. ಖಾಜಾ ಪಟೆಲ ಮತ್ತು ಹುಸೇನ ಪಟೇಲ ಮತ್ತು ಚಾಂದ ಪಟೇಲ ಸಹೋದರರು ಎಂದರೆ ಸರಿ. ಖಾಜಾ ಪಟೇಲ ಇವರ ಮಗಳು ಜರೀನಾ ಎಂದರೆ ಸರಿ. ಜರೀನಾ ಬೇಗಂ ಇವರು 2 ನೇ ಆರೋಪಿತನ ತಾಯಿ ಮತ್ತು 1 ನೇ ಆರೋಪಿತನ ಹೆಂಡತಿ ಎಂದರೆ ಸರಿ. ಜರೀನಾ ತಂದೆ ಮತ್ತು ನಮ್ಮ ತಂದೆ ಅಣ್ಣ-ತಮ್ಮಂದಿರು ಎಂದರೆ ಸರಿ. ಸದರಿ ಆಸ್ತಿಯಲ್ಲಿ ಆರೋಪಿತರ ಪಾಲು ಇದೆ ಎಂದರೆ ಸಾಕ್ಷಿಯು ನಮಗೆ ಸಂಬಂಧವಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಕಬ್ಜೆಯಲ್ಲಿ ಹುಸೇನ ಪಟೇಲ ಮತ್ತು ಖಾಜಾ ಪಟೇಲ ಇರುತ್ತಾರೆ ಎಂದರೆ ಸರಿಯಲ್ಲ.

2. ಸದರಿ ಸಾಗುವಳಿ ಯಾರು ಮಾಡುತ್ತಾರೆ ಎಂದರೆ ಸಾಕ್ಷಿಯು ಪ್ಲಾಟ ಇರುತ್ತದೆ ಎಂದು ನುಡಿಯುತ್ತಾರೆ. ಪ್ಲಾಟ ನಂಬರ 45. ಸದರಿ ನಾನು ಪ್ಲಾಟ ನಂಬರ 45 ನ್ನು ಖರೀದಿ ಮಾಡಿರುತ್ತೇನೆ. ಸದರಿ ಪ್ಲಾಟ ನಲ್ಲಿ ಹುಸೇನ ಪಟೇಲ ಇವರಿಗೆ ಮಾತ್ರ ಪಾಲು ಇರುತ್ತದೆ. ಜಮಿನಿನಲ್ಲಿ ಎಷ್ಟು ಜನರಿಗೆ ಪಾಲು ಇದೆ ಎಂದರೆ ಸಾಕ್ಷಿಯು ಹುಸೇನ ಪಟೇಲ ಇವರಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಅವರವರ ಪಾಲು ಮಾಡಿಕೊಂಡಿರುತ್ತಾರೆ ಎಂದು

ನುಡಿಯುತ್ತಾರೆ. ಜಮಿನಿನಲ್ಲಿ 3 ಜನರಿಗೆ ಪಾಲು ಇರುತ್ತದೆ ಎಂದರೆ ಸಾಕ್ಷಿಯು ಚಾಂದ ಪಟೇಲ, ಹುಸೇನ ಪಟೇಲ, ಖಾಜಾ ಪಟೇಲ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಎಲ್ಲರಿಗೂ ಜಮೀನಿನಲ್ಲಿ ಪಾಲು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ಲಾಟ 30 x 40 ಇದೆ. ಅದರ ಚಕಬಂದಿ ಪೂರ್ವಕ್ಕೆ ನಾನು ಶಾಲೆ ಕಲಿತಿರುವುದಿಲ್ಲ ಆದ್ದರಿಂದ ನನಗೆ ಹೇಳಲು ಬರುವುದಿಲ್ಲ. ನಾನು ಪ್ಲಾಟನ್ನು ಬಾಡಿಯಾಳ ಗ್ರಾಮದಲ್ಲಿ ರಿಜಿಸ್ಟರ ಮಾಡಿಕೊಂಡಿರುತ್ತೇನೆ. ಸದರಿ ಈಗಲು ಕೂಡ ಜಮೀನು ಇರುತ್ತದೆ ಪ್ಲಾಟ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಪ್ಲಾಟ ಇರುತ್ತದೆ ಎಂದು ನುಡಿಯುತ್ತಾರೆ.

3. ಸದರಿ ಆರೋಪಿತರು ಈಗಲೂ ಕೂಡ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ನಾನು ಪ್ಲಾಟ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಜಗಳವು ದಿನಾಂಕಃ 03-06-2024 ರಂದು ಆಗಿರುತ್ತದೆ, ಮದ್ಯಾಹ್ನ 12.00 ಗಂಟೆಗೆ ಆಗಿರುತ್ತದೆ. ದೂರನ್ನು ನೀಡಲು ನಾನು, ನನ್ನ ಗಂಡ ಹೋಗಿರುತ್ತೇವೆ. ಜಗಳವಾಗುವಾಗ ಚಾಸಾಃ 4 ರಿಂದ 6 ರವರು ಇದ್ದರು. ಅದೆ ದಿನ ಪೊಲಿಸ ಠಾಣೆಗೆ ಹೋಗಿರುತ್ತೇನೆ. ಆರೋಪಿತರು ತೊಂದರೆ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ